


### ಪ್ರಳಯ ಹುಸಿ, ಸಾಧನೆ ಹಸಿ

'ಸುಧಾ' ಜ.3ರ ಸಂಚಿಕೆಯ ಮುಖಪುಟ ಲೇಖನಗಳಲ್ಲಿ 2012 ಪ್ರಳಯದ ಕುರಿತು ಹುಸಿಯಾದ ಭೀತಿಯನ್ನು ಉಂಟು ಮಾಡಲಾಗಿತ್ತು ಎಂಬುದನ್ನು ಬಿ.ಎಂ.ಹನೀಫ್‌ರ ಲೇಖನ ಸಾದರಪಡಿಸುತ್ತದೆ. 'ಸುದ್ದಿಯ ಶಿಖರದಲ್ಲಿ' ಲೇಖನದಲ್ಲಿ ಗುಡಿಹಳ್ಳಿ ನಾಗರಾಜರು ಸುದ್ದಿ ಮಾಡಿದವರ ಜತೆಗೆ, ಸದ್ದಿಲ್ಲದೆ ದುಡಿದ ಅಸಾಧಾರಣ ಪ್ರತಿಭಾವಂತರನ್ನೂ ಪರಿಚಯಿಸಿದ್ದಾರೆ.

-ವಿಭಾ ಮುರಳೀಧರ್, ತುಮಕೂರು/ ಕೆ.ಪಂಕಜ, ಹೊಸಪೇಟೆ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಬಿ.ಸಿದ್ದಲಿಂಗಪ್ಪ, ದಾವಣಗೆರೆ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜಪೇಟೆ/ ಪದ್ಮಶರ್ಮ, ಹಾಸನ

### ಮಂಜಾಗಿಸದ ಚಿತ್ರ!

'ಮಂಜಾದವೊ!... ಎಲ್ಲ...!' ಪ್ರಸಾದ ಶೆಣೈ ಅವರ ಚಿತ್ರಲೇಖನ ಮಾಗಿಯ ದಟ್ಟ ಮಂಜನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದೆ.

-ನಿತ್ಯ ಎಸ್.ಮೂಡಬಿದರೆ

### ಚಿಂತನಾರ್ಹ ವಿಚಾರ

ಶಿಕಾಕು ಅವರ 'ಓ ಗಂಡಸೇ ನೀನೆಷ್ಟು ಒಳ್ಳೆಯವನು?' ಚಿಂತನಾರ್ಹ ವಿಚಾರ ಲಹರಿಯಾಗಿದೆ.

-ಆರ್. ಗಿರಿಜ, ದಾವಣಗೆರೆ

### ಅದ್ಭುತ ಅಪರಿಚಿತ ತಾಣ

'ಮಹಾಶಿಲಾ ತಾಣಕ್ಕೆ ಪಯಣ' ಡಾ.ಕೆ.ಮಹೇಶ್ ಅವರ ಪ್ರವಾಸ ಲೇಖನದಲ್ಲಿ ಕನ್ನಡ ನಾಡಿನಲ್ಲಿದ್ದೂ ಅಪರಿಚಿತ ತಾಣವಾಗಿರುವ ಹಿರೇಬೆಣಕಲ್ಲು ಬಗ್ಗೆ ಓದಿ ಆಶ್ಚರ್ಯವಾಯಿತು.

-ಕೋಟೇಶ್ವರ ಸೂರ್ಯ ನಾರಾಯಣ ರಾವ್, ಬೆಂಗಳೂರು

### ಅರ್ಥವತ್ತಾದ ಕ್ಯಾಲೆಂಡರ್

ಈ ಬಾರಿಯ 'ಸುಧಾ' ಕ್ಯಾಲೆಂಡರಿನಲ್ಲಿ 'ಹಕ್ಕಿ ಹಾರುತಿದೆ ನೋಡಿದಿರಾ, ಸಮಯದ ಹಕ್ಕಿ ಹಾರುತಿದೆ...' ಹಾಡಿಗೆ ಚಿತ್ರವು ಅತ್ಯಂತ ಸೂಕ್ತವಾಗಿದೆ, ಅರ್ಥಪೂರ್ಣವಾಗಿದೆ.

2013ನೇ ಇಸ್ವಿ ಮಂಗಳವಾರದಿಂದ ಆರಂಭವಾಗಿ ಮಂಗಳವಾರವೇ ಮುಕ್ತಾಯವಾಗುತ್ತಿರುವುದು ಒಂದು ವಿಶೇಷ.

-ನಾರಾಯಣ ಯಾಜಿ, ಶಿರಾಲಿ

### ಪತ್ತೇದಾರಿಗೆ ಸ್ವಾಗತ

ಬೇಲೂರು ರಾಮಮೂರ್ತಿ ಅವರ 'ಒಳಗೊಳಗಿನ ಕಳ್ಳರು' ಕಥೆ ಪತ್ತೇದಾರಿ ಎಂಬ ವಿಶೇಷಣ ಹೊಂದಿದ್ದರೂ, ಅಷ್ಟೇನೂ ಕುತೂಹಲಕಾರಿಯಾಗಿ ಇರಲಿಲ್ಲ. ಆದರೆ ಮರೆತೇ ಹೋಗಿದ್ದ ಪತ್ತೇದಾರಿ ಪ್ರಕಾರವನ್ನು ಮತ್ತೆ ಪ್ರಚಲಿತಗೊಳಿಸುತ್ತಿರುವ 'ಸುಧಾ' ಪತ್ರಿಕೆಗೆ ವಂದನೆಗಳು.

-ಕೊಹಿಮು, ಬಸರಕೋಡು

### ಎಳೆಯರ ಕಥೆ ಇಷ್ಟ

'ಎಳೆಯರ ಅಂಗಳ'ದ ಲಯಬದ್ಧ ಕವಿತೆ, ಸರಳ ರಚನೆಯ ಕಥೆಗಳು ಇಷ್ಟವಾಗುತ್ತವೆ.

-ಎಚ್.ಎಸ್.ವಿಶ್ವನಾಥ್, ಶಿವಮೊಗ್ಗ

### ಮನರಂಜನೆ ಜತೆಗೆ ಜ್ಞಾನ

'ಸುಧಾ' ವಾರದಿಂದ ವಾರಕ್ಕೆ ಕಂಗೊಳಿಸುತ್ತಿದೆ. ಮನರಂಜನೆಗಷ್ಟೇ ಸೀಮಿತವಾಗದೆ ಜ್ಞಾನದ ಧಾರೆ ಎರೆಯುತ್ತಿರುವ 'ಸುಧಾ' ನಮಗೆ ಅಚ್ಚುಮೆಚ್ಚು.

-ಶ್ರುತಿ ಕೆ.ಎಸ್., ತುರುವೇಕೆರೆ


